# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2007-08 ನೇ ಸಾಲಿಗೆ ರಾಜ್ಯವಲಯ ಯೋಜನೆಯಲ್ಲಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿಗೆ ಒದಗಿಸುವ ರೂ. 4.00 ಕೋಟಿಗಳಿಗೆ ಹೊಸದಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಜಾರಿಗೊಳಿಸುವ ಕುರಿತು.

ಓದಲಾಗಿದೆ: (1) ಆದೇಶ ಸಂಖ್ಯೆ:ಸಕಇ 127 ಬಿ.ಸಿ.ಎ 2005 ದಿ:05-06-2006.

(2) ಏಕ ಕಡತ ಸಂಖ್ಯೆ:ಹಿಂವಕನಿ:ಅವಾಅ:ಸಿಆರ್-15:2007-08. ದಿನಾಂಕ:16-07-2007.

*****

**ಪ್ರಸ್ತಾವನೆ:**

ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ರಾಜ್ಯದ ಅಲೆಮಾರಿ ಜನಾಂಗದವರಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಶಿಫಾರಸ್ಸಿನ ಅನ್ವಯ ಮೀಸಲಾತಿ, ಸೌಲಭ್ಯ ಹಾಗೂ ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ರಾಜ್ಯಮಟ್ಟ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಸಲಹಾ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು 2007-08 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳವರಿಗಾಗಿ ವಿಶೇಷ ಯೋಜನೆಯನ್ನು ಆರಂಭಿಸಲು ಉದ್ದೇಶಿಸಿರುವುದಾಗಿ ತಿಳಿಸುತ್ತಾ, ಈ ಕಾರ್ಯಕ್ರಮದಲ್ಲಿ ಸ್ವಂತ ಉದ್ಯೋಗ ಕೈಗೊಳ್ಳುವ ಪ್ರತಿ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯ ಧನ ನೀಡುವುದಕ್ಕಾಗಿ ರೂ. 400.00 ಲಕ್ಷಗಳನ್ನು ಮೀಸಲಿಡುವುದಾಗಿ ಘೋಷಿಸಿದ್ದನ್ನು ಅನುಸರಿಸಿ ದಿನಾಂಕ:18-06-2007 ರಂದು ನಡೆದ ರಾಜ್ಯ ಮಟ್ಟದ ಅಲೆಮಾರಿ ಜನಾಂಗದ ಸಲಹಾ ಸಮಿತಿಯಲ್ಲಿ ತೀರ್ಮಾನಿಸಿದಂತೆ ರಾಜ್ಯದ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಿಗೆ ಹೊಸದಾಗಿ ರೂಪಿಸಿದ ಕಾರ್ಯಕ್ರಮಗಳನ್ನು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ಜಾರಿಗೊಳಿಸಲು ಹಾಗೂ ಈ ಸಂಬಂಧ 2007-08 ನೇ ಸಾಲಿಗೆ ರಾಜ್ಯವಲಯ ಯೋಜನೆಯ ಲೆಕ್ಕಶೀರ್ಷಿಕೆ "2225-03-800-0-12" ಅಡಿಯಲ್ಲಿ ಒದಗಿಸಿರುವ ರೂ. 400.00 ಲಕ್ಷಗಳಿಂದ ವಿವಿಧ ಕಾರ್ಯಕ್ರಮಗಳಿಗೆ ಹಣ ಹಂಚಿಕೆ ಮಾಡಿ ಮಂಜೂರಾತಿ ನೀಡಲು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರು ಆದೇ[illegible]ತಿರುತ್ತಾರೆ.

[illegible]EMA[illegible]NOTE.doc

## ಆದೇಶ ಸಂಖ್ಯೆ:ಸಕಇ 234 ಬಿಎಂಎಸ್ 2007 ಬೆಂಗಳೂರು.
## ದಿನಾಂಕ:21-09-2007

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ರಾಜ್ಯದ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ ಬೆಂಗಳೂರು, ಇದಕ್ಕೆ ವಸತಿ ಯೋಜನೆ ಕೈಗೊಳ್ಳಲು ರೂ. 100.00 ಲಕ್ಷಗಳನ್ನು (ಒಂದು ನೂರು ಲಕ್ಷಗಳು) ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು. ಇದಕ್ಕೆ ಸ್ವಯಂ ಉದ್ಯೋಗಕ್ಕೆ ಸಾಲ ಮತ್ತು ಸಹಾಯ ಧನ ನೀಡುವುದಕ್ಕೆ ರೂ. 100.00 ಲಕ್ಷಗಳನ್ನು (ಒಂದು ನೂರು ಲಕ್ಷಗಳು), ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ ಕೈಗೊಳ್ಳಲು ರೂ. 50.00 ಲಕ್ಷಗಳನ್ನು ಮತ್ತು ಭೂ ಒಡೆತನ ಯೋಜನೆ ಅನುಷ್ಠಾನಗೊಳಿಸುವುದಕ್ಕೆ ರೂ. 50.00 ಲಕ್ಷಗಳನ್ನು ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇದಕ್ಕೆ ಈ ಜನಾಂಗದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಸಂಬಂಧಿಸಿದಂತೆ ವಿವಿಧ ಯೋಜನೆಗಳನ್ನು ಅಂದರೆ 5 ರಿಂದ 10 ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ನೀಡಲು ರೂ. 30.00 ಲಕ್ಷಗಳು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ ನೀಡಲು ರೂ.35.00 ಲಕ್ಷಗಳು ರಾಜ್ಯದ ಪ್ರತಿಷ್ಠಿತ ಶಾಲೆಗಳಲ್ಲಿ ಈ ಜನಾಂಗದ ವಿದ್ಯಾರ್ಥಿಗಳ ಪ್ರವೇಶಾವಕಾಶ ಸೌಲಭ್ಯಕ್ಕಾಗಿ ರೂ. 15.00 ಲಕ್ಷಗಳು ಹಾಗೂ 4 ಆಶ್ರಮ ಶಾಲೆಗಳನ್ನು ಆರಂಭಿಸಲು ರೂ. 20.00 ಲಕ್ಷಗಳು ಹೀಗೆ ಒಟ್ಟು 100.00 ಲಕ್ಷಗಳನ್ನು (ಒಂದು ನೂರು ಲಕ್ಷಗಳು) ಪ್ರತಿಯೊಂದು ಯೋಜನೆಗಳಲ್ಲೂ ಫಲಾನುಭವಿಗಳನ್ನು ಗುರುತಿಸಲು ಸಾಧ್ಯವಾಗುವಂತೆ ಮಾಹಿತಿ ಕೋಶ (Data Base) ಹೊಂದಬೇಕು ಹಾಗೂ ಷರತ್ತಿನೊಂದಿಗೆ ಹಾಗೂ ಈ ಆದೇಶದೊಂದಿಗೆ ಇರುವ ಅನುಬಂಧ- 1 ರಿಂದ ಅನುಬಂಧ-3 ಗಳಲ್ಲಿನ ಮಾರ್ಗಸೂಚಿಗಳನ್ನು ತಪ್ಪದೆ ಪಾಲಿಸಿ ಅನುಷ್ಠಾನಗೊಳಿಸಬೇಕೆಂಬ ಷರತ್ತುಗಳೊಡನೆ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಆದೇಶದ ಅನುಬಂಧ-3 ರಲ್ಲಿ ಮಂಜೂರು ಮಾಡಿರುವ 4 ಆಶ್ರಮ ಶಾಲೆಗಳನ್ನು ಪ್ರಾರಂಭ ಮಾಡಬೇಕಾಗಿರುವ ಸ್ಥಳಗಳ ಬಗ್ಗೆ ಪ್ರತ್ಯೇಕವಾದ ಆದೇಶವನ್ನು ಹೊರಡಿಸಲಾಗುವುದು.

ಮಂಜೂರಾಗಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಸಲ್ಲಿಸುವ ಅನುದಾನದ ಬಿಲ್ಲಿನ ಮೇಲೆ ವ್ಯವಸ್ಥಾಪಕ ನಿರ್ದೇಶಕರು, ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮ, ನಿಯಮಿತ, ಬೆಂಗಳೂರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ರವರುಗಳು, ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮೇಲು ರುಜು ಪಡೆಯತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು 2007-08 ನೇ ಸಾಲಿನ ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ "2225-03-800-0-12" ರಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಟಿಪ್ಪಣಿ ಸಂಖ್ಯೆ: ಆಇ 397 (ವೆಚ್ಚ-3) 2006, ದಿನಾಂಕ:14.08.2007ರ ಆರ್ಥಿಕ ಇಲಾಖೆ ಹಾಗೂ ಟಿಪ್ಪಣಿ ಸಂಖ್ಯೆ: ಪಿಡಿ 61 ಐಎಂಎಂ 2007, ದಿನಾಂಕ:05.09.2007ರಲ್ಲಿ ಯೋಜನಾ ಇಲಾಖೆಯು ನೀಡಲಾಗಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗು ಪ್ರಕಟಿಸಲಾದ 500 ಪ್ರತಿಗಳನ್ನು ಒದಗಿಸಲು ಕೋರಲಾಗಿದೆ.

ಪ್ರತಿ:

1. ಮಹಾಲೇಖಪಾಲರು, (ಅ ಮತ್ತು ಇ), ಕರ್ನಾಟಕ ಬೆಂಗಳೂರು
2. ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
3. ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ, ಬೆಂಗಳೂರು
4. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
6. ರಾಜ್ಯದ ಮುಖ್ಯ ನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್
7. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳು.
8. ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ-3), ವಿಧಾನಸೌಧ, ಬೆಂಗಳೂರು
9. ನಿರ್ದೇಶಕರು, ಪಿ.ಎಂ.ಐ. ವಿಭಾಗ, ಯೋಜನಾ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು
10. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
11. ಖಜಾನಾಧಿಕಾರಿಗಳು, ರಾಜ್ಯ ಹುಜೂರ ಖಜಾನೆ, ಬೆಂಗಳೂರ
12. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು

BMS G.O

## ಅನುಬಂಧ 1

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವಸತಿ ರಹಿತರಿಗೆ ವಸತಿ ಯೋಜನೆ:

ಅ. ಯೋಜನೆಯ ಉದ್ದೇಶ:

ರಾಜ್ಯದಲ್ಲಿ ಗ್ರಾಮಾಂತರ ಹಾಗೂ ರಸ್ತೆ ಸಂಪರ್ಕ ರಹಿತ ಪ್ರದೇಶಗಳಲ್ಲಿ ವಾಸಿಸುವ ನಿವೇಶನ ರಹಿತ/ವಸತಿ ರಹಿತ ಅಲೆಮಾರಿ /ಅರೆ ಅಲೆಮಾರಿ ಪಂಗಡದವರಿಗೆ ಮೂಲಭೂತ ಅಗತ್ಯಗಳಲ್ಲೊಂದಾದ ವಸತಿ ಸೌಲಭ್ಯವನ್ನು ಒದಗಿಸುವುದು ಅಗತ್ಯವಿರುತ್ತದೆ. ಈ ಜನಾಂಗವು ನಿರ್ದಿಷ್ಟ ಸ್ಥಳದಲ್ಲಿ ನೆಲೆಸಲು ವಸತಿ ಸೌಲಭ್ಯವನ್ನು ಕಲ್ಪಿಸಿದಲ್ಲಿ ಇವರ ಸರ್ವತೋಮುಖ ಅಭಿವೃದ್ಧಿಗೆ ಅದು ಬುನಾಧಿಯಾಗುತ್ತದೆ. ನಿರ್ದಿಷ್ಟ ನೆಲೆ ಇಲ್ಲದೆ ಈ ಜನರು ಉದ್ಯೋಗವನ್ನರಿಸಿಕೊಂಡು, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದು ಇವರು ಶೈಕ್ಷಣಿಕ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಹಿಂದುಳಿಯಲು ಪ್ರಮುಖ ಕಾರಣಗಳಲ್ಲೊಂದಾಗಿರುತ್ತದೆ. ಈ ಜನಾಂಗದ ನಿವೇಶನ/ವಸತಿ ರಹಿತ ಕುಟುಂಬಗಳಿಗೆ ಆದ್ಯತೆಯ ಮೇಲೆ ವಸತಿ ಸೌಲಭ್ಯ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

ಆ. ವಸತಿ ಯೋಜನೆಯ ಅನುಷ್ಠಾನ

ಅಲೆಮಾರಿ ಹಾಗೂ ಅರೆಅಲೆಮಾರಿ ಜನಾಂಗದ ನಿವೇಶನ/ವಸತಿ ರಹಿತರಿಗೆ ಈ ಯೋಜನೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ರಾಜೀವ್ ಗಾಂದಿ ಗ್ರಾಮೀಣ ವಸತಿ ನಿಗಮದ ಮೂಲಕ ಅನುಷ್ಠಾನಗೊಳಿಸುವುದು.

ಇ. ಘಟಕ ವೆಚ್ಚ

ಈ ಯೋಜನೆಯಡಿಯಲ್ಲಿ ಅಲೆ ಮಾರಿ ಮತ್ತು ಅರೆ ಅಲೆಮಾರಿ ಪಂಗಡದವರಿಗೆ ಪ್ರತಿಯೊಂದು ಮನೆಯನ್ನು ಗರಿಷ್ಠ ರೂ.30.000/- ಗಳ ಘಟಕ ವೆಚ್ಚದಲ್ಲಿ ರಾಜೀವ್ ಗಾಂದಿ ಗ್ರಾಮೀಣ ವಸತಿ ನಿಗಮವು ನಿರ್ಮಿಸುವುದು. ಅತ್ಯಂತ ಹಿಂದುಳಿದ ಅಲೆ ಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಿಗೆ ಸಾಲದ ಹೊರೆಇಲ್ಲದೆ ಮನೆ ನಿರ್ಮಿಸಲು ಪೂರ್ಣ ಘಟಕ ವೆಚ್ಚವನ್ನು ಸಹಾಯಧನವನ್ನಾಗಿ ಹಿಂದುಳಿದ ವರ್ಗಗಳ ಇಲಾಖೆಯಿಂದ ರಾಜೀವ್ ಗಾಂದಿ ಗ್ರಾಮೀಣ ವಸತಿ ನಿಗಮಕ್ಕೆ ಬಿಡುಗಡೆ ಮಾಡಲು ಸರ್ಕಾರವು ಅನುಮೋದನೆ ನೀಡಿದೆ.

ಈ. ಅರ್ಹತೆ

i. ಫಲಾನುಭವಿಯು ಪ್ರಸ್ತುತ ಜಾರಿಯಲ್ಲಿರುವ 30.3.2002ರ ಸರ್ಕಾರದ ಆದೇಶದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಪ್ರವರ್ಗ-1ರಲ್ಲಿ ಸೇರಿಸಲ್ಪಟಿರಬೇಕು. ಹಾಗೂ 1977ರಲ್ಲಿ ಹಿಂದುಳಿದ ವರ್ಗಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸುವುದಕ್ಕೆ ಮುಂಚಿತವಾಗಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಪಂಗಡಗಳೆಂದು ದಿನಾಂಕ:01.02.1966ರ ಆಧೇಶದಲ್ಲಿ ಗುರುತಿಸಲ್ಪಟ್ಟಿರಬೇಕು.

ii. ಫಲಾನುಭವಿ ಕುಟುಂಬದ ವಾರ್ಷಿಕ ವರಮಾನ ರೂ.11,000/-ಗಳಿಗಿಂತ ಮೀರಿರಬಾರದು.

iii. ಫಲಾನುಭವಿಯು ನಿವೇಶನ/ವಸತಿ ರಹಿತ ನಿವಾಸಿ ಅಥವಾ ಕುಟುಂಬಕ್ಕೆ ಸೇರಿದವರಾಗಿರಬೇಕು.

iv. ಫಲಾನುಭವಿಯು ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಬೇರೆ ಯಾವುದೆ ಯೋಜನೆ/ಇಲಾಖೆಯಿಂದ ವಸತಿ ಸೌಲಭ್ಯ ಪಡೆದಿರಬಾರದು.

v. ಫಲಾನುಭವಿಯು ಕರ್ನಾಟಕ ರಾಜ್ಯದ ಸಮಾನ್ಯ ನಿವಾಸಿಯಾಗಿರಬೇಕು.

vi. ನಿವೇಶನವು ಕುಟುಂಬದ ಮಹಿಳೆಯ ಹೆಸರಿನಲ್ಲಿರಬೇಕು.

(ಎಂ.ಎಂ.ಬಾಬಿ)

ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಸರ್ಕಾರಿ ಆದೇಶ ಸಂಖ್ಯೆ: ಸಕಇ 234 ಬಿಸಿಎ 2007, ಬೆಂಗಳೂರು, ದಿ:21–9–2007 ರ

<u>ಅನುಬಂಧ–2</u>

# ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳು

1. ಅಲೆಮಾರಿ ಜನಾಂಗದವರ ಅಭಿವೃದ್ಧಿಗೆ ಆರ್ಥಿಕ ನೆರವು ಒದಗಿಸಲು ವಿಶೇಷ ಯೋಜನೆ (**Existing programme**)

<u>ಯೋಜನೆಯ ಉದ್ದೇಶ</u>

1977 ರಲ್ಲಿ ಹಿಂದುಳಿದ ವರ್ಗಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಿರುವುದಕ್ಕೆ ಮುಂಚಿತವಾಗಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರೆಂದು ಗುರ್ತಿಸಲ್ಪಟ್ಟು, ಪ್ರಸ್ತುತ ಜಾರಿಯಲ್ಲಿರುವ ದಿನಾಂಕ:30.03.2002 ರ ಸರ್ಕಾರದ ಆದೇಶ ಸಂಖ್ಯೆ ಸಕಇ 225 ಬಿಸಿಎ 2000 ರಲ್ಲಿನ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಪ್ರವರ್ಗ–1 ರಲ್ಲಿನ ಗೊಂದಳಿ, ಗೋಂಧಳಿ, ಗೋಸಂಗಿ, ಭಾವಾಜಿ, ಬುಡಬುಡಿಕೆ, ಹೆಳವ, ಹಾಲಕ್ಕಿ ಪಕ್ಕಲ್, ಕುಡುಬಿ, ಮುಂತಾದ ಅಲೆಮಾರಿ ಜನಾಂಗದವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಹಿಂದುಳಿದವರಾಗಿದ್ದು, ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಇತರೆ ಜಾತಿಗಳವರೊಡನೆ ಸ್ಪರ್ಧಿಸಿ ಸೌಲಭ್ಯ ಪಡೆಯುವ ಚೈತನ್ಯ ಇಲ್ಲದಿರುವುದನ್ನು ಗಮನದಲ್ಲಿಟ್ಟುಕೊಂಡು, ಅವರಿಗೆ ಆರ್ಥಿಕ ಸೌಲಭ್ಯ ಒದಗಿಸಿ ಒಂದು ಸ್ಥಳದಲ್ಲಿ ನೆಲೆ ನಿಲ್ಲಲು ಹಾಗೂ ಸೂಕ್ತ ಉದ್ಯೋಗಾವಕಾಶವನ್ನು ಕಲ್ಪಿಸಲು ಮತ್ತು ಅವರ ಸ್ವಯಂ ಉದ್ಯೋಗಕ್ಕಾಗಿ ಸೂಕ್ತ ತರಬೇತಿಯನ್ನು ನೀಡಲು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಈ ಜನಾಂಗದವರಿಗೆ ವಿಶೇಷ ಯೋಜನೆಯನ್ನು ರೂಪಿಸಿ, 2006–07 ನೇ ಸಾಲಿನಿಂದ ಜಾರಿಗೆ ತರಲಾಗಿದ್ದು, ಈ ಕಾರ್ಯಕ್ರಮವನ್ನು 2007–08ನೇ ಸಾಲಿನಿಂದ ಮುಂದುವರೆಸಲು ಆದೇಶಿಸಿದೆ.

ಅ. ಸಾಲ ನೀಡಲು ಗುರ್ತಿಸಿರುವ ಯೋಜನೆಗಳು :

ಕೌದಿ ಹೊಲೆಯುವುದು, ಪಾತ್ರೆ ವ್ಯಾಪಾರ, ಕೈಮಗ್ಗಾರಿಗೆ, ಮೊಲ/ಹಂದಿ ಸಾಕಾಣಿಕೆ, ಹೂವಿನ ವ್ಯಾಪಾರ, ಗಿಡಮೂಲಿಕೆಗಳ ಸಂಗ್ರಹಣೆ ಮತ್ತು ವೈದ್ಯೋಪಚಾರ, ಸುಣ್ಣ ಸುಡುವಿಕೆ ಇತ್ಯಾದಿಯಾಗಿ ಅತೀ ಹಿಂದುಳಿದ ಪಂಗಡದವರು ಅವರ ಆರ್ಥಿಕ ಅಭಿವೃದ್ಧಿಗೆ ಕೈಗೊಳ್ಳುವ ಚಟುವಟಿಕೆಗಳಿಗೆ ಆರ್ಥಿಕ ನೆರವನ್ನು ನೀಡುವುದು.

ಆ. ಘಟಕ ವೆಚ್ಚ–ಸಾಲ ಹಾಗೂ ಸಹಾಯಧನ

I. ಅರ್ಜಿದಾರರು ಕೈಗೊಳ್ಳುವ ಚಟುವಟಿಕೆ ಮತ್ತು ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಗರಿಷ್ಠ ರೂ.15,000/– ಗಳ ಸಾಲ ಮತ್ತು ಸಹಾಯಧನ ನೀಡಲಾಗುವುದು. ಅರ್ಜಿದಾರರು ಕೈಗೊಳ್ಳುವ ಚಟುವಟಿಕೆಯ ಸಮಂಜಸತೆ, ಲಾಭದಾಯಕತೆ ಹಾಗೂ ಮಾರುಕಟ್ಟೆಯ ವ್ಯವಸ್ಥೆಯನ್ನಾಧರಿಸಿ ಆಯಾ ಘಟಕ ವೆಚ್ಚಕ್ಕನುಗುಣವಾಗಿ ಶೇಕಡ 50 ಅಥವಾ ಗರಿಷ್ಠ ರೂ.5000/–ಗಳ ಸಹಾಯಧನ (ಸಬ್ಸಿಡಿ) ನೀಡಲಾಗುತ್ತಿದೆ. ಫಲಾನುಭವಿಯು ಸಾಲವನ್ನು ನಿಗದಿತ 5 ವರ್ಷದೊಳಗೆ ಬಡ್ಡಿ ಸಹಿತ ಮರುಪಾವತಿ ಮಾಡಬೇಕು.

II. ಅ) ಈ ಜನಾಂಗದವರು ಸಂಘಟಿಸಿ ನಡೆಸುವ ಸ್ವ ಸಹಾಯ (SHG) ಗುಂಪಿನ ಗರಿಷ್ಠ 10 ಜನರಿಗೆ ಯೋಜನೆಗೆ ತಕ್ಕಂತೆ ಪ್ರತಿ ವ್ಯಕ್ತಿಗೆ ತಲಾ ರೂ.15,000/-ಗಳಿಗೆ ಮೀರದಂತೆ ಒಂದು ಗುಂಪಿಗೆ ರೂ.1,50,000/-ಗಳನ್ನು ಮುಂಜೂರು ಮಾಡುವುದು.

ಆ) ಈ ಜನಾಂಗದವರು ಸಹಕಾರಿ ಸಂಘಗಳ ಮೂಲಕ ಕೈಗೊಳ್ಳುವ ಚಟುವಟಿಕೆಗಳಿಗೆ ಗರಿಷ್ಠ 20 ಜನರಿಗೆ ಚಟುವಟಿಕೆಯನ್ನಾಧರಿಸಿ ಪ್ರತಿ ವ್ಯಕ್ತಿ ರೂ.15,000/- ರಂತೆ ಮಿತಿಯೊಳಗೆ ಸಹಕಾರಿ ಸಂಘಕ್ಕೆ ಮೊತ್ತ ಗರಿಷ್ಠ ರೂ.3.00 ಲಕ್ಷಗಳನ್ನು ಮುಂಜೂರು ಮಾಡುವುದು.

ಈ ಮೇಲಿನ ಎಲ್ಲಾ ಪ್ರಕರಣದಲ್ಲಿ ಪ್ರತಿ ಫಲಾನುಭವಿಗೆ ನಿಗಮದಿಂದ ದೊರಕುವ ಸಹಾಯಧನದ ಮೊತ್ತವು ಶೇಕಡ 50 ಭಾಗ ಅಥವಾ ಗರಿಷ್ಠ ರೂ.5000/-.

ಇ. ಅರ್ಹತೆ

i. ಈ ಯೋಜನೆಯಡಿ ಆರ್ಥಿಕ ನೆರವು ಪಡೆಯಲು ಅರ್ಜಿದಾರರು 1977 ರಲ್ಲಿ ಹಿಂದುಳಿದ ವರ್ಗಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸುವ ಪೂರ್ವದಲ್ಲಿ ಅಲೆಮಾರಿ/ಅರೆ ಅಲೆಮಾರಿ ಪಂಗಡಗಳೆಂದು ಸರ್ಕಾರದ ದಿನಾಂಕ:1.2.1966 ರ ಆದೇಶದಲ್ಲಿ ಗುರುತಿಸಲ್ಪಟ್ಟು ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ:30.3.2002 ಆದೇಶದನ್ವಯ ಪ್ರವರ್ಗ-1 ರಲ್ಲಿನ ಸೇರ್ಪಡೆಯಾಗಿರುವ ಜಾತಿಗೆ ಸೇರಿದವರಾಗಿರಬೇಕು.

ii. ಅರ್ಜಿದಾರರ ವಾರ್ಷಿಕ ವರಮಾನ ರೂ.22000/- ಗಳಿಗಿಂತ ಕಡಿಮೆ ಇರಬೇಕು.

iii. ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 15 ವರ್ಷ ವಾಸವಾಗಿರಬೇಕು.

iv. ಸರ್ಕಾರದ ಬೇರೆ ಯಾವುದೇ ಯೋಜನೆಯಲ್ಲಿ ಸಾಲ ಅಥವಾ ಆರ್ಥಿಕ ನೆರವು ಪಡೆದಿರಬಾರದು

v. ಶೇಕಡ 33 ರಷ್ಟು ಮಹಿಳೆಯರಿಗೆ ಮೀಸಲು ಇಡಲಾಗಿದ್ದು, ವಿಧವೆಯರಿಗೆ ವಿಶೇಷ ಆದ್ಯತೆ ನೀಡಲಾಗುವುದು.

vi. ಇದರಲ್ಲಿ ಶೇಕಡ 5 ರಷ್ಟು ಅಂಗವಿಕಲರಿಗೆ ಕಡ್ಡಾಯ ಸೌಲಭ್ಯ ಒದಗಿಸಬೇಕು.

ಈ. ಸಾಲಮರುಪಾವತಿ ಮತ್ತು ಬಡ್ಡಿದರ (5 ವರ್ಷ)

ಸಾಲ ಬಿಡುಗಡೆಯಾದ ದಿನಾಂಕದಿಂದ 2 ತಿಂಗಳ ತರುವಾಯ 58 ತಿಂಗಳ ಅವಧಿಯಲ್ಲಿ ಮಾಸಿಕ ಕಂತುಗಳಲ್ಲಿ ಸಾಲವನ್ನು ಫಲಾನುಭವಿಗಳು ಮರುಪಾವತಿ ಮಾಡಬೇಕು. ಈ ಯೋಜನೆಯಡಿ ನಿಗಮದಿಂದ ನೀಡಲಾಗುವ ಸಾಲದ ಮೊತ್ತಕ್ಕೆ ವಾರ್ಷಿಕ ಶೇ. 4 ರಂತೆ ಸರಳ ಬಡ್ಡಿಯನ್ನು ವಿಧಿಸಲಾಗುತ್ತದೆ. ನಿಗದಿತ ಕಂತುಗಳಲ್ಲಿ ಪಾವತಿ ಮಾಡದೇ ಸುಸ್ತಿಯಾಗುವ ಸಾಲದ ಕಂತುಗಳ ಮೊತ್ತಕ್ಕೆ ಶೇಕಡ 2 ರಷ್ಟು ಸುಸ್ತಿ ಬಡ್ಡಿ ವಿಧಿಸಲಾಗುತ್ತದೆ.

ಉ. ಫಲಾನುಭವಿಗಳ ಆಯ್ಕೆ

ಆಯಾ ವರ್ಷಕ್ಕೆ ಜಿಲ್ಲೆಗೆ ನೀಡಲಾಗುವ ಗುರಿಯನ್ವಯ ಜಿಲ್ಲಾ ಮಟ್ಟದಲ್ಲಿ ನಿಗಮದಿಂದ ಅರ್ಹ ಅಭ್ಯರ್ಥಿಗಳಿಂದ ಆಹ್ವಾನಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಅವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಮೂಲಕ ಫಲಾನುಭವಿಗಳ ಆಯ್ಕೆ ಮಾಡಬೇಕು.

ಈ. ಫಲಾನುಭವಿಗಳ ಆಯ್ಕೆ:

ಈ ಜನಾಂಗದವರಿಗೆ ಹಮ್ಮಿಕೊಳ್ಳಲಾಗುವ ವೈಯಕ್ತಿಕ ನೀರಾವರಿ ಯೋಜನೆಗೂ ಸಹಾ ಅರ್ಹ ಫಲಾನುಭವಿಗಳಿಂದ ಅರ್ಜಿಯನ್ನು ಆಹ್ವಾನಿಸಿ, ಫಲಾನುಭವಿಗಳ ಆಯ್ಕೆಗೆ ನಿಗಮವು ಈಗಾಗಲೇ ಅನುಸರಿಸುತ್ತಿರುವ ಕಾರ್ಯವಿಧಾನವನ್ನೇ ಅನುಸರಿಸುವುದು.

ಉ. 2007-08ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2225-03-800-0-12 ರಲ್ಲಿ ಒದಗಿಸಿರುವ ರೂ.400.00 ಲಕ್ಷಗಳಲ್ಲಿ ರೂ.50.00 ಲಕ್ಷಗಳನ್ನು ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆಯನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಿ ಸರ್ಕಾರ ಅನುಮತಿ ನೀಡಿದೆ.

3. **ಅಲೆಮಾರಿ ಹಾಗೂ ಅರೆಅಲೆಮಾರಿ ಜನಾಂಗದವರಿಗೆ ಭೂ ಒಡೆತನ ಯೋಜನೆ:**

ಹಿಂದುಳಿದ ವರ್ಗಗಳಲ್ಲಿ ಅತ್ಯಂತ ಹಿಂದುಳಿದ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಭೂರಹಿತ ಕೃಷಿ ಕಾರ್ಮಿಕರಿಗೆ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನು ಖರೀದಿಸಲು ಸಹಾಯಧನ ಮತ್ತು ಸಾಲ ಸೌಲಭ್ಯ ಒದಗಿಸುವ ಮೂಲಕ ಈ ಜನಾಂಗದವರಿಗೆ ಭೂ ಒಡೆತನ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಮಂಜೂರಾತಿ ನೀಡಿದೆ.

ಅ. ಅರ್ಹತೆ:

i. ಫಲಾನುಭವಿಯು ಹಾಲಿ ಜಾರಿಯಲ್ಲಿರುವ 30.3.2002ರ ಸರ್ಕಾರದ ಆದೇಶದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಪ್ರವರ್ಗ-1ರಲ್ಲಿ ಸೇರಿಸಲ್ಪಟ್ಟಿದ್ದು, 1977ರಲ್ಲಿ ಹಿಂದುಳಿದ ವರ್ಗಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸುವುದಕ್ಕೂ ಹಿಂದೆ ಆಗಿನ ರಾಜ್ಯ ಸರ್ಕಾರದ ದಿನಾಂಕ:01.02.1966ರ ಆದೇಶದಲ್ಲಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಪಂಗಡಗಳೆಂದು ಗುರುತಿಸಲ್ಪಟ್ಟಿರಬೇಕು.

ii. ಸುಸ್ತಿದಾರರಾಗಿರಬಾರದು

iii. ಭೂ ಮಾಲೀಕರು ಅಲೆಮಾರಿ/ಅರೆ ಅಲೆಮಾರಿ ಜನಾಂಗ ಹಾಗೂ ಪ್ರವರ್ಗ1ಕ್ಕೆ ಸೇರಿರಬಾರದು.

iv. ಈ ಕಾರ್ಯಕ್ರಮದಡಿಯಲ್ಲಿ ಅಲೆಮಾರಿ ಜನಾಂಗದ ಭೂರಹಿತ ಕಾರ್ಮಿಕರಿಗೆ ಖರೀದಿಸಲುದ್ದೇಶಿಸಿದ ಜಮೀನಿನಮೇಲೆ ತಂಟೆ, ತಕರಾರು, ಕುಳಿಉ ಕಾಯ್ದೆ ಉಲ್ಲಂಘನೆ, ಭೂಸುಧಾರಣೆ ಕಾಯ್ದೆ, ಲ್ಯಾಂಡ್ ಗ್ರಾಂಟ್ ಕಾನೂನು, ಅರಣ್ಯ ಕಾಯ್ದೆ ಇತ್ಯಾದಿ ಕಾಯ್ದೆಗಳ ಉಲ್ಲಂಘನೆಯಾಗಿರಬಾರದು, ಖರೀದಿಗೆ ಪ್ರಸ್ತಾಪಿಸಿಸುವ ಜಮೀನು ಕೃಷಿಗೆ ಯೋಗ್ಯವಾಗಿರಬೇಕು.

v. ಖರೀದಿಗೆ ಪ್ರಸ್ತಾಪಿಸುವ ಜಮೀನುಯಾವುದೇ ಋಣಭಾರದಿಂದ ಮುಕ್ತವಾಗಿರತಕ್ಕದ್ದು.

vi. ಅರ್ಜಿದಾರರ ವಾರ್ಷಿಕ ವರಮಾನ ರೂ.22,000/- ಗಳನ್ನು ಮೀರಿರಬಾರದು.

ಆ. ಘಟಕ ವೆಚ್ಚ:

ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಮತ್ತು ಪಂಗಡ ಗಳಿಗೆ ಈಗಾಗಲೇ ಅನುಷ್ಠಾನಗೊಳಿಸುತ್ತಿರುವ ಭೂ ಒಡೆತನ ಯೋಜನೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಸಕಇ 42 ಎಸ್ ಡಿಸಿ 04 (ಭಾ) ದಿನಾಂಕ: 06.06.2006ರಲ್ಲಿ ಘಟಕ ವೆಚ್ಚವನ್ನು ನಿಗದಿಪಡಿಸಿರುವಂತೆ ರಾಜ್ಯದ ಪ್ರತಿಯೊಂದು ಹಳ್ಳಿಗೆ ನೊಂದಣಿ ಇಲಾಖೆ ನಿಗದಿಪಡಿಸಿರುವ ಮಾರ್ಗಸೂಚಿ ಬೆಲೆಯನ್ನೇ

ಊ. 2007–08 ನೇ ಸಾಲಿಗೆ ರಾಜ್ಯವಲಯ ಯೋಜನೆ ಲೆಕ್ಕ ಶೀರ್ಷಿಕೆ 2225–03–800–012 ರಲ್ಲಿ ಒದಗಿಸಿರುವ ರೂ.400.00ಲಕ್ಷಗಳಲ್ಲಿ ರೂ.100.00 ಲಕ್ಷಗಳನ್ನು ಈ ಕಾರ್ಯಕ್ರಮದ ಅನುಷ್ಠಾನಕ್ಕೆ ವಿನಿಯೋಗಿಸಲು ಸರ್ಕಾರವು ಅನುಮತಿ ನೀಡಿದೆ.

2. ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ

ಯೋಜನೆ ಉದ್ದೇಶ:ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರು ಕೃಷಿ ಭೂಮಿ ಹೊಂದಿದ್ದಲ್ಲಿ ಅಂತಹವರಿಗೆ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ವೈಯಕ್ತಿಕ ನೀರಾವರಿ ಸೌಲಭ್ಯ ಕಲ್ಪಿಸಿ, ಅವರ ಕೃಷಿ ಅಭಿವೃದ್ಧಿಗೆ ನೆರವು ನೀಡಬಯಸಲಾಗಿದೆ. ಈಗಾಗಲೇ ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮವು ಪ್ರವರ್ಗ–1 ಹಾಗೂ ಪ್ರವರ್ಗ–2ಎ ನಲ್ಲಿರುವ ಹಿಂದುಳಿದ ವರ್ಗಗಳ ಕೃಷಿಗಾರರಿಗೆ ಅನುಷ್ಠಾನಗೊಳಿಸುತ್ತಿರುವ ವೈಯಕ್ತಿಕ ನೀರಾವರಿ ಯೋಜನೆಯ ಮಾದರಿಯಲ್ಲೇ ಅಲೆಮಾರಿ ಜನಾಂಗದವರಿಗೂ ಅನುಷ್ಠಾನಗೊಳಿಸಬೇಕು.

ಅ. ಅರ್ಹತೆ

i.ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಜಿದಾರರು ಅಲೆಮಾರಿ ಹಾಗೂ ಅರೆ ಅಲೆಮಾರಿ ಪಂಗಡಕ್ಕೆ ಸೇರಿದವರೆಂದು ಹಿಂದುಳಿದ ವರ್ಗಗಳನ್ನು ಪ್ರತ್ಯೇಕವಾಗಿ 1977 ರಲ್ಲಿ ವರ್ಗೀಕರಿಸುವ ಪೂರ್ವದಲ್ಲಿಯೇ ದಿನಾಂಕ:1.02.1966 ರ ರಾಜ್ಯ ಸರ್ಕಾರದ ಸಂಖ್ಯೆ ಪಿಎಎಸ್ 262 1965 ರ ಸರ್ಕಾರದ ಆದೇಶದಲ್ಲಿ ಗುರ್ತಿಸಲ್ಪಟ್ಟ ಹಾಲಿ ಜಾರಿಯಲ್ಲಿರುವ ಸರ್ಕಾರದ 30.03.2002 ರ ಆದೇಶದಲ್ಲಿನ ಹಿಂದುಳಿದ ವರ್ಗಗಳ ಪ್ರವರ್ಗ–1ರ ಪಟ್ಟಿಯಲ್ಲಿರತಕ್ಕದ್ದು.

ii.ಸಣ್ಣ ಹಾಗೂ ಅತಿ ಸಣ್ಣ ರೈತ ಕುಟುಂಬಕ್ಕೆ ಸೇರಿದ ಅಲೆಮಾರಿ/ ಅರೆಅಲೆಮಾರಿ ಜನಾಂಗದವರು ಕನಿಷ್ಠ 2 ಎಕರೆ ಜಮೀನು ಹೊಂದಿರಬೇಕು.

iii.ಅರ್ಜಿದಾರರ ವಾರ್ಷಿಕ ವರಮಾನ ರೂ.22,000/–ಗಳಿಗಿಂತ ಮೀರಿರಬಾರದು.

ಆ. ಘಟಕ ವೆಚ್ಚ:

ಸರ್ಕಾರದ ಆದೇಶ ಸಂಖ್ಯೆ ಸಕಇ 152 ಎಸ್‌ಡಿಸಿ 02 ದಿನಾಂಕ 16–09–2006 ರ ರೀತ್ಯ ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ರೂ.1.00ಲಕ್ಷಗಳ ಘಟಕ ವೆಚ್ಚವನ್ನೇ ಅಲೆಮಾರಿ ಜನಾಂಗದವರಿಗೆ ಅನುಷ್ಠಾನಗೊಳಿಸಲುದ್ದೇಶಿಸಿರುವ ವೈಯಕ್ತಿಕ ನೀರಾವರಿ ಯೋಜನೆಗೆ ಅಳವಡಿಸಿಕೊಂಡು, ರೂ.86,000/– ಸಹಾಯಧನ ಹಾಗೂ ಗರಿಷ್ಠ ರೂ.14,000/–ಗಳ ಸಾಲಸೌಲಭ್ಯವನ್ನು ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ನೀಡಬೇಕು.

ಇ. ಸಾಲದ ಮೊತ್ತಕ್ಕೆ ಬಡ್ಡಿದರ;

ಪ್ರತಿಯೊಂದು ವೈಯಕ್ತಿಕ ನೀರಾವರಿ ಕೊಳವೆಬಾವಿ ಘಟಕಕ್ಕೆ ನಿಗಮದಿಂದ ನೀಡಲಾಗುವ ಗರಿಷ್ಠ ರೂ.14,000/–ಸಾಲದ ಮೊತ್ತಕ್ಕೆ ನಿಗಮವು ವಾರ್ಷಿಕವಾಗಿ ಶೇ.4 ರಷ್ಟನ್ನು ಬಡ್ಡಿಯನ್ನು ವಿಧಿಸಬೇಕು.

(Guidance value) ಘಟಕ ವೆಚ್ಚವನ್ನಾಗಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರಿಗೆ ಅನುಷ್ಠಾನಗೊಳಿಸುವ ಕಾರ್ಯಕ್ರಮಕ್ಕೂ ಅಳವಡಿಸಿ ಮಂಜೂರಾತಿ ನೀಡಿದೆ.

ಇ. ನಿಗಮದಿಂದ ನೀಡಲಾಗುವ ಸಹಾಯಧನ ಮತ್ತು ಸಾಲದ ಮೊತ್ತ

ಘಟಕ ವೆಚ್ಚದ ಶೇಕಡ 50 ಭಾಗ ಸಹಾಯಧನ ಮತ್ತು ಇನ್ನುಳಿದ ಶೇಕಡ 50 ಭಾಗವನ್ನು ಅವಧಿ ಸಾಲವನ್ನಾಗಿ (term loan )ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ನೀಡಬೇಕು. ಅವಧಿ ಸಾಲಕ್ಕೆ ಶೇಕಡ 6ರಂತೆ ವಾರ್ಷಿಕ ಬಡ್ಡಿಯನ್ನು ವಿಧಿಸಬಹುದು. ಡಾ:ಅಂಬೇಡ್ಕರ್ ನಿಗಮವು ಅವಧಿಸಾಲದ ಭಾಗವನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ -ಪರಿಶಿಷ್ಟ ವರ್ಗಗಳ ಹಣಕಾಸು ಹಾಗೂ ಅಭಿವೃದ್ಧಿ ನಿಗಮದಿಂದ ಪಡೆಯುತ್ತಿರುವಂತೆ, ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮವು ಕೂಡಾ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಿ, ಸರ್ಕಾರದ ಆರ್ಥಿಕ ಇಲಾಖೆಯ ಖಾತರಿಆಧಾರದ ಮೇಲೆ ಅವಧಿಸಾಲವನ್ನು ಪಡೆಯಬಹುದು. ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಹಾಗೂ ಅಭಿವೃದ್ಧಿ ನಿಗಮದಿಂದ ಅವಧಿ ಸಾಲ ಸೌಲಭ್ಯ ದೊರಕುವ ವರೆಗೆ, ರಾಜ್ಯ ಸರ್ಕಾರವು ಈ ಜನಾಂಗದವರ ಅಭಿವೃದ್ಧಿಗಾಗಿ ಒದಗಿಸುವ ಅನುದಾನದಲ್ಲೇ ಅವಧಿ ಸಾಲ ಸೌಲಭ್ಯವನ್ನು ಭೂ ಒಡೆತನ ಯೋಜನೆಯಲ್ಲಿ ಅಲೆಮಾರಿ/ಅರೆಅಲೆಮಾರಿ ಜನಾಂಗದ ಭೂ ರಹಿತ ಕೂಲಿ ಕಾರ್ಮಿಕರಿಗೆ ನೀಡಬೇಕು.

ಈ. ಈ ಕಾರ್ಯಕ್ರಮದ ಅನುಷ್ಠಾನ ಕುರಿತಂತೆ ಫಲಾನುಭವಿಗಳ ಆಯ್ಕೆ, ಅರ್ಜಿ ಸಲ್ಲಿಸುವ ವಿಧಾನ, ದಾಖಲೆಗಳ ನಿರ್ವಹಣೆ (Documentation ) ಇತ್ಯಾದಿ ಕುರಿತಂತೆ ಡಾ:ಅಂಬೇಡ್ಕರ್ ಅಭಿವೃದ್ಧಿ ನಿಗಮವು ಅನುಸರಿಸುತ್ತಿರುವ ಮಾದರಿಯನ್ನೇ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಅಳವಡಿಸಿಕೊಳ್ಳಬೇಕು.

ಉ. ಯೋಜನೆ ಅನುದಾನ: 2007–08ನೇ ಸಾಲಿನ ಆಯವ್ಯಯದಲ್ಲಿ ರಾಜ್ಯವಲಯ ಯೋಜನೆ ಲೆಕ್ಕ ಶೀರ್ಷಿಕೆ 2225–03–800–0–12 ರಲ್ಲಿ ಅಲೆಮಾರಿ ಜನಾಂಗದವರ ಅಭಿವೃದ್ಧಿಗೆ ಒದಗಿಸಿರುವ ರೂ.400.00 ಲಕ್ಷಗಳಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ರೂ.50.00 ಲಕ್ಷಗಳನ್ನು ವಿನಿಯೋಗಿಸಲು ಮಂಜೂರಾತಿ ನೀಡಿದೆ.

(ಎಂ.ಎಂ.ಬಾಟ್)

ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

<u>ಅನುಬಂಧ-3</u>

## ಹಿಂದುಳಿದ ವರ್ಗಗಳ ಇಲಾಖೆಯಿಂದ ಅಲೆಮಾರಿ ಜನಾಂಗದವರಿಗೆ ಅನುಷ್ಠಾನಗೊಳಿಸುವ ಶೈಕ್ಷಣಿಕ ಕಾರ್ಯಕ್ರಮಗಳು

### 1. ಮಾಧ್ಯಮಿಕ/ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ

(1) ಯೋಜನೆಯ ಉದ್ದೇಶ ಮತ್ತು ಪ್ರೋತ್ಸಾಹ ಧನ ದರಗಳು:

ಅಲೆಮಾರಿ ಹಾಗೂ ಅರೆಅಲೆಮಾರಿ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡುವುದರ ಮೂಲಕ ಅವರಲ್ಲಿ dropout ಪ್ರಮಾಣವನ್ನು ಕಡಿಮೆ ಮಾಡಲು ಹಾಗೂ ಈ ಹಂತದ ಶಿಕ್ಷಣ ಮುಂದುವರಿಕೆಯ ಉದ್ದೇಶದಿಂದ ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅವರು ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಶೇಖಡ 60 ಹಾಗೂ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿದಂತಹವರಿಗೆ ಅರ್ಹತೆಯ ಆಧಾರದ ಮೇಲೆ ಈ ಕೆಳಕಾಣಿಸಿದ ದರಗಳಲ್ಲಿ ಪ್ರೋತ್ಸಾಹಧನ ಮಂಜೂರು ಮಾಡಲು ಈ ಕಾರ್ಯಕ್ರಮವನ್ನು ರೂಪಿಸಿ ಜಾರಿಗೆ ತರಲಾಗುತ್ತಿದೆ.

| ಕ್ರ.ಸಂ | ತರಗತಿ | ಮಾಹೆಯಾನ ಪ್ರೋತ್ಸಾಹ ಧನ ದರಗಳು | | ಅವಧಿ |
|---|---|---|---|---|
| | | ಬಾಲಕರು | ಬಾಲಕಿಯರು | |
| 1 | 5 ರಿಂದ 7 ನೇ ತರಗತಿ ವಿದ್ಯಾರ್ಥಿಗಳಿಗೆ | ರೂ.100/- | ರೂ.150/- | 10 ತಿಂಗಳು |
| 2 | 8 ರಿಂದ 10 ನೇ ತರಗತಿ | ರೂ.150/- | ರೂ.200/- | 10 ತಿಂಗಳು |

(2) ಅರ್ಹತೆ:

I. ದಿನಾಂಕ:30.3.2002 ರ ಸರ್ಕಾರದ ಆದೇಶದನ್ವಯ ಹಾಲಿ ಚಾಲ್ತಿಯಲ್ಲಿರುವ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-1 ರಲ್ಲಿದ್ದು, 1977 ರಲ್ಲಿ ಹಿಂದುಳಿದ ವರ್ಗಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸುವ ಪೂರ್ವದಲ್ಲಿ ರಾಜ್ಯ ಸರ್ಕಾರದ ದಿನಾಂಕ:1.2.1966 ರ ಅಧಿಸೂಚನೆಯ ರೀತ್ಯ ಅಲೆಮಾರಿ ಹಾಗೂ ಅರೆ ಅಲೆಮಾರಿ ಪಂಗಡಕ್ಕೆ ಸೇರಿದ ವಿದ್ಯಾರ್ಥಿಯಾಗಿರ ಬೇಕು.

II. ವಿದ್ಯಾರ್ಥಿ ಪಾಲಕರು/ಪೋಷಕರ ವಾರ್ಷಿಕ ಆದಾಯ ರೂ.22000/-ಗಳ ಮಿತಿಗಿಂತ ಮೀರರಬಾರದು.

III. ವಿದ್ಯಾರ್ಥಿಯು 5 ರಿಂದ 10 ನೇ ತರಗತಿ ವರೆಗೆ ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರಬೇಕು.

IV. ಈ ಯೋಜನೆಯಡಿ ಅರ್ಜಿಯನ್ನು ಸಲ್ಲಿಸಲು ವಿದ್ಯಾರ್ಥಿಯು ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

v. ಈ ಯೋಜನೆಯ ಸೌಲಭ್ಯಕ್ಕಾಗಿ ಅರ್ಜಿಯನ್ನು ಸಲ್ಲಿಸಲ್ಪಟ್ಟ ವಿದ್ಯಾರ್ಥಿಗಳಲ್ಲಿ ಹೆಚ್ಚು ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆಗೆ ಒಳಪಟ್ಟು ಶೈಕ್ಷಣಿಕ ಅರ್ಹತೆಯ( academic merit) ಆಧಾರದ ಮೇಲೆ ಪ್ರೋತ್ಸಾಹಧನವನ್ನು ಮಂಜೂರು ಮಾಡುವುದು.

vi. ಈ ಯೋಜನೆಗೆ ಆಯವ್ಯಯದಲ್ಲಿ ಒದಗಿಸುವ ಅನುದಾನದಲ್ಲಿ 5 ರಿಂದ 7ನೇ ತರಗತಿಯ ವಿದ್ಯಾರ್ಥಿಗಳಿಗೆ ಶೇಕಡ 60 ರಷ್ಟು ಮೊತ್ತವನ್ನು ಹಾಗೂ ಇನ್ನುಳಿದ ಶೇಕಡ 40 ರಷ್ಟು ಮೊತ್ತವನ್ನು 8 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮಂಜೂರು ಮಾಡಲು ಅನುಷ್ಠಾನಾಧಿಕಾರಿಗಳು ಹಂಚಿಕೆ ಮಾಡಿಕೊಳ್ಳುವುದು.

vii. ವಿದ್ಯಾರ್ಥಿಯು ಸರ್ಕಾರದ ಇನ್ನಾವುದೇ ಯೋಜನೆಯಿಂದ ವಿದ್ಯಾರ್ಥಿ ವೇತನ ಅಥವಾ ವಸತಿ ನಿಲಯ ಸೌಲಭ್ಯವನ್ನು ಪಡೆದಿರಬಾರದು.

viii. ಈ ಪ್ರೋತ್ಸಾಹಧನವನ್ನು ನವೀಕರಿಸಲು ವಿದ್ಯಾರ್ಥಿಯು ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು.

ಅನುದಾನ ಹಂಚಿಕೆ ಹಾಗೂ ಮಂಜೂರಾತಿ ವಿಧಾನ:

i. ಪ್ರತಿ ಜಿಲ್ಲೆಗೆ ಈ ಯೋಜನೆಗಾಗಿ ಒದಗಿಸಲಾದ ಅನುದಾನವನ್ನು ಮಾಧ್ಯಮಿಕಶಾಲೆ ವಿದ್ಯಾರ್ಥಿಗಳಿಗೆ ಶೇಕಡ 60% ರಷ್ಟು ಹಾಗೂ ಶೇಕಡ 40% ರಷ್ಟನ್ನು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಿಕೊಳ್ಳತಕ್ಕದ್ದು.

ii. ಈ ಮೇಲಿನ ಅನುದಾನದಂತೆ ಹಂಚಿಕೆ ಮಾಡಿಕೊಳ್ಳಲಾದ ಅನುದಾನದಲ್ಲಿ ಮೊದಲು ಅರ್ಹ ನವೀಕರಣ (ಡಿಜಟಿಜಿಚಿಟ ಚಿಠಿಠಿಟiಛಿಚಿಟಿಣs) ಅರ್ಜಿಗಳಿಗೆ ಅಗತ್ಯವಾದ ಮೊತ್ತವನ್ನು ಕಾಯ್ದಿರಿಸಿ, ನಂತರ ಉಳಿಯುವ ಅನುದಾನವನ್ನು ಹೊಸ ವಿದ್ಯಾರ್ಥಿಗಳಿಗೆ (fresh applicants)ಹಂಚಿಕೆ ಮಾಡಿಕೊಂಡು ಅದರ ಮಿತಿಯೊಳಗೆ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ತುಲನಾತ್ಮಕ ರೀತಿಯಲ್ಲಿ ಇಳಿಕೆ ಕ್ರಮದನುಸಾರ ಅರ್ಹತಾ ವಿದ್ಯಾರ್ಥಿ ವೇತನವನ್ನು ಹೊಸ ಅರ್ಜಿದಾರರಿಗೆ ಮಂಜೂರು ಮಾಡತಕ್ಕದ್ದು.

iii. ವಿದ್ಯಾರ್ಥಿಗಳು ಈ ಯೋಜನೆಯ ಸೌಲಭ್ಯಕ್ಕೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರ ಮೂಲಕ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

2007–08ನೇ ಸಾಲಿಗೆ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿಗಾಗಿ ರಾಜ್ಯವಲಯ ಯೋಜನೆ ಲೆಕ್ಕ ಶೀರ್ಷಿಕೆ 2225–03–800–0–12 ರಲ್ಲಿ ಒದಗಿಸಿರುವ ರೂ.400.00 ಲಕ್ಷಗಳಲ್ಲಿ ಈ ಮೇಲಿನ ಶೈಕ್ಷಣಿಕ ಕಾರ್ಯಕ್ರಮಗಳಿಗೆ ರೂ.100.00 ಲಕ್ಷಗಳನ್ನು ಹಂಚಿಕೆ ಮಾಡಿ, ಇದರಲ್ಲಿ ವಿಶೇಷ ಪ್ರೋತ್ಸಾಹಧನ ಯೋಜನೆ ಅನುಷ್ಠಾನಕ್ಕೆ ರೂ.30.00 ಲಕ್ಷಗಳನ್ನು ವಿನಿಯೋಗಿಸಲು ಮಂಜೂರಾತಿ ನೀಡಿದೆ.

## 2. ಮೆಟ್ರಿಕ್ ನಂತರ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ

### (1) ಯೋಜನೆ ಉದ್ದೇಶ ಮತ್ತು ಅರ್ಹತಾ ವಿದ್ಯಾರ್ಥಿವೇತನದ ದರಗಳು:

ಅಲೆಮಾರಿ/ ಅರೆ ಅಲೆಮಾರಿ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ಶಿಕ್ಷಣವನ್ನು ಮುಂದುವರೆಸಲು ಹಾಗೂ ಈ ಹಂತದ ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಉತ್ತೇಜನ ನೀಡುವ ಉದ್ದೇಶದಿಂದ ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ವಿಶ್ವ ವಿದ್ಯಾಲಯದಿಂದ ಅಂಗೀಕೃತವಾದ ಕೋರ್ಸಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅವರು ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಅರ್ಹತೆಯ ಆಧಾರದ ಮೇಲೆ ಈ ಕೆಳಕಾಣಿಸಿದ ದರಗಳಲ್ಲಿ ಅರ್ಹತಾ ವಿದ್ಯಾರ್ಥಿ ವೇತನ ಮಂಜೂರು ಮಾಡಲು ಈ ಯೋಜನೆಯ ಅನುಷ್ಠಾನಕ್ಕಾಗಿ ಮಂಜೂರಾತಿ ನೀಡಿದೆ.

ಮೆಟ್ರಿಕ್-ನಂತರದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ಕಾಲೇಜು ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನವನ್ನು ಈ ಕೆಳಕಾಣಿಸಿದ ದರಗಳಲ್ಲಿ ಮಂಜೂರು ಮಾಡಲು ಆದೇಶಿಸಿದೆ.

| | | |
|---|---|---|
| i. | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶೇಖಡ 50 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳಿಸಿ ಪಿಯುಸಿ,ಐಟಿಐ, ಡಿಪ್ಲೋಮಾ ಕೋರ್ಸುಗಳಿಗೆ ಇತ್ಯಾದಿ ಪ್ರವೇಶ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗೆ | ಮಾಸಿಕ ರೂ.300/- ರಂತೆ 10 ತಿಂಗಳಿಗೆ |
| ii. | ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶೇಕಡ 50 ಅಥವಾ ಅದಕ್ಕಿಂತ ಹೆಚ್ಚಿನ ಅಂಕ ಗಳಿಸಿ ಪದವಿ ತತ್ಸಮಾನವಾದ ಇನ್ನಿತರ ಕೋರ್ಸುಗಳಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ( ಬಿಇ, ಎಂ.ಬಿ.ಬಿ.ಎಸ್, ಬಿಡಿಎಸ್ ವಿದ್ಯಾರ್ಥಿಗಳನ್ನು ಹೊರತುಪಡಿಸಿ) | ಮಾಸಿಕ ರೂ.400/- ರಂತೆ 10 ತಿಂಗಳಿಗೆ |
| iii. | ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕನಿಷ್ಠ ಶೇ. 50 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳಿಸಿ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ( ತಾಂತ್ರಿಕ, ವೈದ್ಯಕೀಯ ಹಾಗೂ ಡೆಂಟಲ್‌ವಿಜ್ಞಾನ, ಸ್ನಾತಕ ಕೋರ್ಸುಗಳನ್ನು ಹೊರತುಪಡಿಸಿ) | ಮಾಸಿಕ ರೂ.400/- ರಂತೆ 10 ತಿಂಗಳಿಗೆ |
| iv. | ಪಿ.ಯು.ಸಿ ಪರೀಕ್ಷೆಯಲ್ಲಿ ಕನಿಷ್ಠ ಶೇ. 50 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳಿಸಿ ಸಿಇಟಿ ಮೂಲಕ ಸರ್ಕಾರಿ ಕೋಟಾದಲ್ಲಿ ಬಿಇ, ಎಂ.ಬಿ.ಬಿ.ಎಸ್, ಬಿಡಿಎಸ್ ತತ್ಸಮಾನವಾದ ಇನ್ನಿತರ ತಾಂತ್ರಿಕ/ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ | ಮಾಸಿಕ ರೂ.500/- ರಂತೆ 10 ತಿಂಗಳಿಗೆ |

ಅನುದಾನ ಹಂಚಿಕೆ ಹಾಗೂ ಮಂಜೂರಾತಿ ವಿಧಾನ

i. ಈ ಯೋಜನೆಗೆ ಒದಗಿಸಿರುವ ಅನುದಾನವನ್ನು ಈ ಕೆಳಗಿನ ಅನುಪಾತದಲ್ಲಿ ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಾಧಿಕಾರಿಗಳು ಹಂಚಿಕೆ ಮಾಡಿಕೊಂಡು ಪ್ರತಿ ಆರ್ಥಿಕ ವರ್ಷದ ಅನುದಾನದ ಲಭ್ಯತೆಯ ಮಿತಿಯೊಳಗೆ ಅರ್ಹತಾ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡುವುದು.

| | | |
|---|---|---|
| a) | ಪಿ.ಯು.ಸಿ | :ಶೇ.25% |
| b) | ಪದವಿ (ಬಿಇ, ಎಂಬಿಬಿಎಸ್ ಡೆಂಟಲ್ ಹೊರತುಪಡಿಸಿ) | :ಶೇ.25% |
| c) | ಸ್ನಾತಕೋತ್ತರ ಕೋರ್ಸುಗಳಲ್ಲಿ (ವೈದ್ಯಕೀಯ ತಾಂತ್ರಿಕ ಹಾಗೂ ಡೆಂಟಲ್ ಹೊರತು ಪಡಿಸಿ) | :ಶೇ.25% |
| d) | ಬಿ.ಇ, ಎಂಬಿಬಿಎಸ್, ಡೆಂಟಲ್ ಕೋರ್ಸುಗಳು | :ಶೇ.25% |

ಒಂದು ವೇಳೆ ಯಾವುದಾದರೂ ಜಿಲ್ಲೆಯಲ್ಲಿ ಸ್ನಾತಕೋತ್ತರ ಕೋರ್ಸುಗಳ್ಳ ಶಿಕ್ಷಣ ಸಂಸ್ಥೆ ಇಲ್ಲದಿದ್ದಲ್ಲಿ ಈ ಕೆಳಕಾಣಿಸಿದ ಅನುಪಾತವನ್ನು ಅನುಷ್ಠಾಧಿಕಾರಿ ಅನುಸರಿಸತಕ್ಕದ್ದು.

| ಪಿ.ಯು.ಸಿ | ಪದವಿ ಅಥವಾ ತತ್ಸಮಾನ ಕೋರ್ಸ | ಬಿ.ಇ, ಎಂಬಿಬಿಎಸ್, ಬಿಡಿಎಸ್ |
|---|---|---|
| 40% | 40% | 20% |

ii. ಪ್ರತಿ ಆರ್ಥಿಕ ವರ್ಷದಲ್ಲಿ ಜಿಲ್ಲೆಗೆ ಈ ಯೋಜನೆಗೆ ಒದಗಿಸುವ ಅನುದಾನದಲ್ಲಿ ಈ ಮೇಲಿನಂತೆ ಕೋರ್ಸುವಾರು ಅನುದಾನವನ್ನು ಹಂಚಿಕೆ ಮಾಡಿಕೊಂಡ ನಂತರ ಪ್ರತಿ ಕೋರ್ಸಿನಲ್ಲಿ ಸ್ವೀಕರಿಸಲಾದ ನವೀಕರಣ ಅರ್ಜಿಗಳಿಗೆ ಅಗತ್ಯವಾದ ಅನುದಾನವನ್ನು ಕಾಯ್ದಿರಿಸಿ, ನಂತರ ಉಳಿಯುವ ಅನುದಾನದ ಲಭ್ಯತೆಯೊಳಗೆ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ತುಲನಾತ್ಮಕ ರೀತಿಯಲ್ಲಿ ಇಳಿಕೆ ಕ್ರಮಾನುಸಾರ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ ಹೊಸದಾಗಿ ಅರ್ಹತಾ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡುವುದು.

iii. ವಿದ್ಯಾರ್ಥಿಗಳು ಈ ಅರ್ಹತಾ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಯನ್ನು ತಾನು ವ್ಯಾಸಂಗ ಮಾಡುವ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲರ ಮೂಲಕ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

ಅರ್ಹತೆ

i. ವಿದ್ಯಾರ್ಥಿಗಳು ಪ್ರಸ್ತುತ ಜಾರಿಯಲ್ಲಿರುವ 30.3.2002 ರ ಆದೇಶದ ಹಿಂದುಳಿದ ವರ್ಗಗಳ ಪ್ರವರ್ಗ–1 ರ ಪಟ್ಟಿಯಲ್ಲಿನ ಜಾತಿಗೆ ಸೇರಿದ್ದು, 1977 ರಲ್ಲಿ ಹಿಂದುಳಿದ ವರ್ಗಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸುವ ಪೂರ್ವದಲ್ಲಿ ರಾಜ್ಯ ಸರ್ಕಾರವು ಹೊರಡಿಸಿದ ದಿನಾಂಕ:01.02.1966 ರ ಆದೇಶದಲ್ಲಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಜಂಗಡಗಳೆಂದು ಗುರುತಿಸಲ್ಪಟ್ಟಿರಬೇಕು.

ii. ಅಭ್ಯರ್ಥಿಯು ಈ ಯೋಜನೆಯ ಸೌಲಭ್ಯಕ್ಕೆ ಪ್ರಥಮವಾಗಿ ಅರ್ಜಿ ಸಲ್ಲಿಸಲು ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಕನಿಷ್ಠ ಶೇ.50 ಗಳಿಸಿರಬೇಕು.

iii. ಈ ಅರ್ಹತಾ ವಿದ್ಯಾರ್ಥಿ ವೇತನದ ನವೀಕರಣಕ್ಕೆ ವಿದ್ಯಾರ್ಥಿಯು ಹಿಂದಿನ ತರಗತಿ ಪರೀಕ್ಷೆ ಯ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು.

iv. ವಿದ್ಯಾರ್ಥಿಯು ಪೋಷಕರ/ಪಾಲಕರ ಕುಟುಂಬದ ವಾರ್ಷಿಕ ಆದಾಯ ರೂ.22000/- ಗಳಿಗಿಂತ ಮೀರಿರಬಾರದು.

v. ವಿದ್ಯಾರ್ಥಿಯು ಸರ್ಕಾರದಿಂದ / ವಿಶ್ವ ವಿದ್ಯಾಲಯದಿಂದ ಇನ್ನಾವುದೇ ವಿದ್ಯಾರ್ಥಿ ವೇತನ ಅಥವಾ ಉಚಿತ ವಿದ್ಯಾರ್ಥಿ ನಿಲಯ ಸೌಲಭ್ಯ ಪಡೆದಿರಬಾರದು.

2007-08 ನೇ ಸಾಲಿಗೆ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿಗಾಗಿ ರಾಜ್ಯ ವಲಯ ಲೆಕ್ಕ ಶೀರ್ಷಿಕೆ 2225-03-800-0-12 ರಲ್ಲಿ ಒದಗಿಸಿರುವ ರೂ.400.00 ಲಕ್ಷಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಿರುವ ರೂ.100.00 ಲಕ್ಷಗಳಲ್ಲಿ ಅರ್ಹತಾ ವಿದ್ಯಾರ್ಥಿವೇತನ ಮಂಜೂರಾತಿಗೆ ರೂ.35.00 ಲಕ್ಷಗಳನ್ನು ವಿನಿಯೋಗಿಸಲು ಮಂಜೂರಾತಿ ನೀಡಿದೆ.

## 3. ಆಶ್ರಮಶಾಲೆಗಳ ಪ್ರಾರಂಭ ಹಾಗೂ ನಿರ್ವಹಣೆ

ಯೋಜನೆಯ ಉದ್ದೇಶ

ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಕುಟುಂಬಕ್ಕೆ ಸೇರಿದ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ನೆರವು ಹಾಗೂ ಉತ್ತೇಜನ ನೀಡುವ ದೃಷ್ಟಿಯಿಂದ 125 ಸಂಖ್ಯಾಬಲದ 4 ಆಶ್ರಮಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿ, ಈ ಯೋಜನೆಗೆ ಮಂಜೂರಾಗಿ ನೀಡಿದೆ. ಈ ಆಶ್ರಮಶಾಲೆಗಳು ನಿವಾಸಿ ಶಾಲೆಗಳಾಗಿದ್ದು, ಅತ್ಯಂತ ಹಿಂದುಳಿದ ಅಲೆಮಾರಿ ಜನಾಂಗದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಅಂದರೇ 1 ರಿಂದ 5ನೇ ತರಗತಿಯವರೆಗೆ ಊಟ ಮತ್ತು ವಸತಿ ಸೌಲಭ್ಯ ಹಾಗೂ ಶಾಲಾ ಸೌಲಭ್ಯವನ್ನು ಒದಗಿಸಲಾಗುವುದು. ರಸ್ತೆ ಸಂಪರ್ಕವಿಲ್ಲದ ಅತ್ಯಂತ ಹಿಂದುಳಿದ ಪ್ರದೇಶಗಳ ಅಲೆಮಾರಿ ಜನಾಂಗದ ನಿವಾಸಿಗಳ ಮಕ್ಕಳಿಗೆ ಉಚಿತವಾಗಿ ಹಾಸ್ಟೆಲ್ ಸೌಲಭ್ಯದೊಂದಿಗೆ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದರ ಮೂಲಕ ಈ ಜನಾಂಗದ ಶೈಕ್ಷಣಿಕ ಪ್ರಗತಿಗೆ ಅಗತ್ಯ ನೆರವು ಹಾಗೂ ಉತ್ತೇಜನ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಪ್ರಾರಂಭಿಕವಾಗಿ ರಾಜ್ಯದಲ್ಲಿ ಅಲೆಮಾರಿ ಜನಾಂಗದವರು ಹೆಚ್ಚಾಗಿ ನೆಲೆಸಿರುವಂತಹ ಪ್ರದೇಶಗಳಲ್ಲಿ 4 ಆಶ್ರಮಶಾಲೆಗಳನ್ನು ತೆರೆಯಲು ಸರ್ಕಾರವು ಮಂಜೂರಾತಿ ನೀಡಿದೆ.

i. ಅರ್ಹತೆ

ಅ. ಈ ಶಾಲೆಗಳಲ್ಲಿ ಪ್ರವೇಶ ಪಡೆಯಲು ಮಕ್ಕಳು 1977 ರಲ್ಲಿ ಹಿಂದುಳಿದ ವರ್ಗಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸುವ ಪೂರ್ವದಲ್ಲಿ ರಾಜ್ಯ ಸರ್ಕಾರವು ಹೊರಡಿಸಿದ್ದ ದಿನಾಂಕ:01.02.1966 ರ ಆದೇಶದಲ್ಲಿ ಅಲೆಮಾರಿ-ಅರೆ ಅಲೆಮಾರಿ ಪಂಗಡಗಳೆಂದು ಗುರ್ತಿಸಲ್ಪಟ್ಟಿದ್ದು ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ ಸಕಇ 225 ಬಿಸಿಎ 2000 ದಿನಾಂಕ:30.03.2002 ರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಪ್ರವರ್ಗ-1 ರಲ್ಲಿ ವರ್ಗೀಕರಿಸಲ್ಪಟ್ಟಿರ ಬೇಕು.

ಆ. 1 ನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ವಯಸ್ಸು ಸಾರ್ವಜನಿಕ ಶಿಕ್ಷಣ ಇಲಾಖೆಯು ಪ್ರಾಥಮಿಕ ಶಾಲೆಯ ಪ್ರವೇಶಕ್ಕೆ ನಿಗಧಿ ಪಡಿಸಿರುವ ಕನಿಷ್ಠ ವಯೋಮಿತಿ ಉಳ್ಳವರಾಗಿರತಕ್ಕದ್ದು.

ಇ. ಈ ಆಶ್ರಮಶಾಲೆಗಳಲ್ಲಿ ಶೇಖಡ 75 ಭಾಗ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಮಕ್ಕಳಿಗೆ ಕಡ್ಡಾಯವಾಗಿ ಮೀಸಲಿಡಲಾಗಿರುತ್ತದೆ.. ಉಳಿದ ಶೇಕಡ 25 ರಷ್ಟು ಸ್ಥಾನಗಳನ್ನು ಈ ಕೆಳಗಿನ ಶೇಖಡವಾರು ಅನುಪಾತದಲ್ಲಿ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಎ ಮಕ್ಕಳಿಗೆ ಕಾಯ್ದಿರಿಸಲಾಗಿರುತ್ತದೆ.

| ಪ್ರವರ್ಗ | 1 | 2ಎ | 2ಬಿ | 3ಎ | 3ಬಿ | ಎಸ್‌ಸಿ | ಎಸ್‌ಟಿ | ಒಟ್ಟು |
|---|---|---|---|---|---|---|---|---|
| ಶೇಕಡವಾರು ಅನುಪಾತ | 10 | 35 | 09 | 09 | 12 | 21 | 4 | 100% |

II. ಸೌಲಭ್ಯಗಳು

ಅ) ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.350/-ಗಳ ವೆಚ್ಚದಲ್ಲಿ 10 ತಿಂಗಳ ಅವಧಿಗೆ ಆಹಾರ.

ಆ) ಪ್ರತಿ ವಿದ್ಯಾರ್ಥಿಗೆ ರೂ.200/-ಗಳ ವೆಚ್ಚದಲ್ಲಿ 2 ಜೊತೆ ಸಮವಸ್ತ್ರ.

ಇ) ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ರೂ.100/-ಗಳ ವೆಚ್ಚದಲ್ಲಿ ಪಠ್ಯಪುಸ್ತಕ, ಲೇಖನ ಸಾಮಾಗ್ರಿಗಳ ಪೂರೈಕೆ.

ಈ) ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.25/- ಗಳ ಸಂಕೀರ್ಣ ವೆಚ್ಚದಲ್ಲಿ ಸೋಪು, ಹಲ್ಲು ಪುಡಿ, ಹೇರ್ ಆಯಿಲ್ ಪೂರೈಕೆ.

ಉ) ಪ್ರತಿ ವಿದ್ಯಾರ್ಥಿಗೆ ರೂ.300/- ಗಳ ವೆಚ್ಚದಲ್ಲಿ ಮೂರು ವರ್ಷಕ್ಕೊಮ್ಮೆ ಹಾಸಿಗೆ ಹೊದಿಕೆ ಸರಬರಾಜು.

ಊ) ಪ್ರತಿ ಬಾಲಕ ವಿದ್ಯಾರ್ಥಿಗೆ ವಾರ್ಷಿಕ ರೂ.50/- ಗಳ ವೆಚ್ಚದಲ್ಲಿ ಕ್ಷೌರ ವ್ಯವಸ್ಥೆ.

ಋ) ಪ್ರತಿ ಆಶ್ರಮಶಾಲೆಗೆ ವಾರ್ಷಿಕವಾಗಿ ರೂ.750/- ಗಳ ವೆಚ್ಚದಲ್ಲಿ ದಿನಪತ್ರಿಕೆಗಳ ಪೂರೈಕೆ.

ಎ) ಪ್ರತಿ ಆಶ್ರಮಶಾಲೆಗೆ ವಾರ್ಷಿಕ ರೂ.1000/- ಗಳ ವೆಚ್ಚದಲ್ಲಿ ವೈದ್ಯಕೀಯ ಸೌಲಭ್ಯ.

ಏ) ಪ್ರತಿ ಆಶ್ರಮಶಾಲೆಗೆ ಮಾಹೆಯಾನ ರೂ.300/- ಗಳ ವೆಚ್ಚದಲ್ಲಿ ನೈರ್ಮಲ್ಯತೆ ನಿರ್ವಹಣೆ

ಐ) ಪ್ರತಿ ಆಶ್ರಮಶಾಲೆಗೆ ಮಾಹೆಯಾನ ರೂ.1500/- ಗಳಂತೆ (ಅಥವಾ ವಾಸ್ತವಿಕ) ವೆಚ್ಚದಲ್ಲಿ 12 ತಿಂಗಳ ಅವಧಿಗೆ ವಿದ್ಯುಚ್ಛಕ್ತಿ ವೆಚ್ಚ

ಒ) ಪ್ರತಿ ಆಶ್ರಮಶಾಲೆಗೆ ಮಾಹೆಯಾನ ರೂ.10,000/- ಗಳಂತೆ (ಅಥವಾ ವಾಸ್ತವಿಕ ಬಾಡಿಗೆ) 12 ತಿಂಗಳ ಅವಧಿಗೆ ಬಾಡಿಗೆ ವೆಚ್ಚ.

III. ಪ್ರತಿಯೊಂದು ಆಶ್ರಮಶಾಲೆಗೆ ಬೇಕಾಗುವ ಮಾದರಿ ಸಿಬ್ಬಂದಿ.

| ಕ್ರ. ಸಂ | ವರ್ಗ | ವಿದ್ಯಾರ್ಥಿ ಸಂಖ್ಯಾಬಲ | ಸಿಬ್ಬಂದಿ | | |
|---|---|---|---|---|---|
| | | | ಶಿಕ್ಷಕರು | ಅಡುಗೆಯವರು | ಅಡುಗೆ ಸಹಾಯಕರು |
| 1 | ಮೊದಲನೆ ವರ್ಗ | 25 | 1 | 1 | 1 |
| 2 | 2ನೇ ವರ್ಗ | 50 | 1 | 1 | – |
| 3 | 3ನೇ ವರ್ಗ | 75 | 1 | 1 | 1 |
| 4 | 4ನೇ ವರ್ಗ | 100 | 1 | 1 | – |
| 5 | 5ನೇ ವರ್ಗ | 125 | 1 | 1 | 1 |
| | ಒಟ್ಟು | | 5 | 5 | 3 |

**IV.** 125 ಸಂಖ್ಯಾಬಲದ ಒಂದು ಆಶ್ರಮಶಾಲೆಯ ನಿರ್ವಹಣೆಗೆ ವಾರ್ಷಿಕವಾಗಿ ತಗಲುವ ಮಾದರಿ ವೆಚ್ಚ :

**a)** ಆವರ್ತಕ ವೆಚ್ಚ

| | | |
|---|---|---|
| ಅ. | ಭೋಜನ ವೆಚ್ಚ ರೂ.350>< 125 ವಿದ್ಯಾರ್ಥಿಗಳಿಗೆ ><10 ತಿಂಗಳಿಗೆ | ರೂ.4,37,500.00/- |
| ಆ. | ಸಂಕೀರ್ಣ ವೆಚ್ಚ ರೂ.25><25><10 ತಿಂಗಳಿಗೆ | ರೂ.31,250.00 |
| ಇ. | ನೈರ್ಮಲ್ಯ ವೆಚ್ಚ ಮಾಸಿಕ ರೂ.300><12 ತಿಂಗಳಿಗೆ | ರೂ.3600.00 |
| ಈ. | ವಿದ್ಯುಚ್ಛಕ್ತಿ ವೆಚ್ಚ ಮಾಸಿಕ ರೂ.1500><12 ತಿಂಗಳಿಗೆ | ರೂ.18000.00 |
| ಉ. | 2 ಜೊತೆ ಸಮವಸ್ತ್ರ ವೆಚ್ಚ ರು>200><125 ವಿದ್ಯಾರ್ಥಿಗಳು (ವಾರ್ಷಿಕ) | ರೂ.25000.00 |
| ಊ. | ಪಠ್ಯ ಪುಸ್ತಕ ಹಾಗೂ ಲೇಖನ ಸಾಮಾಗ್ರಿ ವೆಚ್ಚ ರೂ.100><125 ವಿದ್ಯಾರ್ಥಿಗಳು | ರೂ.12500.00 |
| ಋ. | ಕ್ಷೌರ ವೆಚ್ಚ (ಬಾಲಕರ ಆಶ್ರಮಶಾಲೆ) ರೂ.50><125 ವಿದ್ಯಾರ್ಥಿಗಳಿಗೆ | ರೂ.6250.00 |
| ಎ. | ದಿನಪತ್ರಿಕೆ ವೆಚ್ಚ (ವಾರ್ಷಿಕ) | ರೂ.750.00 |
| ಏ. | ವೈದ್ಯಕೀಯ ವೆಚ್ಚ (ವಾರ್ಷಿಕ) | ರೂ.1000.00 |
| ಐ | ಕಟ್ಟಡದ ಬಾಡಿಗೆ ವೆಚ್ಚ ರೂ.10000><12 ತಿಂಗಳಿಗೆ | ರೂ.1,20,000.00 |
| | **ಒಟ್ಟು** | **ರೂ.6,55,850.00** |

**b.** ಸಿಬ್ಬಂದಿ ವೆಚ್ಚ

| | | |
|---|---|---|
| ಅ | ಶಿಕ್ಷಕರು(6250-12000) ರೂ.9125><12><5 ಶಿಕ್ಷಕರು | ರೂ.5,47,500.00 |
| ಆ | ಅಡುಗೆಯವರು(5200-8200) ರೂ.6700><12><5 ಅಡುಗೆಯವರು | ರೂ.4,02,000.00 |
| ಇ | ಅಡುಗೆ ಸಹಾಯಕರು (4800-7275) ರೂ.6037><12><3,6,5 | ರೂ.2,17,332.00 |
| | | ರೂ.11,66,882.00 |
| | **ವಾರ್ಷಿಕ (ಎ+ಬಿ)** | **ರೂ.18,22,732.00** |

2007-08 ನೇ ಸಾಲಿಗೆ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿಗಾಗಿ ರಾಜ್ಯವಲಯ ಯೋಜನೆ ಲೆಕ್ಕ ಶೀರ್ಷಿಕೆ 2225-03-800-0-12 ರಲ್ಲಿ ಒದಗಿಸಿರುವ ರೂ.400.00 ಲಕ್ಷಗಳಲ್ಲಿ ಈ ಮೇಲಿನ ಶೈಕ್ಷಣಿಕ ಕಾರ್ಯಕ್ರಮಗಳಿಗೆ ರೂ.100.00 ಲಕ್ಷಗಳನ್ನು ಹಂಚಿಕೆ ಮಾಡಿ, ಇದರಲ್ಲಿ ನಾಲ್ಕು ಆಶ್ರಮಶಾಲೆಗಳ ಪ್ರಾರಂಭಕ್ಕೆ ರೂ.30.00 ಲಕ್ಷಗಳನ್ನು ವಿನಿಯೋಗಿಸಲು ಮಂಜೂರಾತಿ ನೀಡಿದೆ.

## 4. ರಾಜ್ಯದ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಸೌಲಭ್ಯ.

### 1.ಯೋಜನೆ ಉದ್ದೇಶ

ಅಲೆಮಾರಿ ಹಾಗೂ ಅರೆ ಅಲೆಮಾರಿ ಪಂಗಡದಲ್ಲಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿರುವ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಮೂಲಕ ಉತ್ತಮ ಶಿಕ್ಷಣ ಸೌಲಭ್ಯವನ್ನು ಒದಗಿಸಲು ಉದ್ದೇಶಿಸಿದೆ. ಈ ಯೋಜನೆಯನ್ನು ಅಲೆಮಾರಿ/ ಅರೆ ಅಲೆಮಾರಿ ಪಂಗಡದ ವಿದ್ಯಾರ್ಥಿಗಳಿಗೂ ಕೂಡಾ ಅನುಷ್ಠಾನಗೊಳಿಸಲು ಪ್ರಸ್ತಾಪಿಸಿದೆ. ಈ ಯೋಜನೆಯಡಿ ಗುರುತಿಸಲಾಗಿರುವ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಾದ ಶ್ರೀ ರಾಮಕೃಷ್ಣ ವಿದ್ಯಾಶಾಲೆ, ಬೆಂಗಳೂರಿನ ಜನಸೇವಾ ವಿದ್ಯಾಕೇಂದ್ರ ಮುಂತಾದ ಶಿಕ್ಷಣ ಸಂಸ್ಥೆಗಳನ್ನು ಮಾದರಿಶಾಲೆಗಳೆಂದು ಪರಿಗಣಿಸಿ ಈ ಶಾಲೆಗಳಲ್ಲಿ ಅಲೆಮಾರಿ/ಅರೆಅಲೆಮಾರಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ 5ನೇ ತರಗತಿಯಿಂದ ಪ್ರವೇಶಾವಕಾಶ ಕಲ್ಪಿಸಲು ಹಾಗೂ ವಸತಿಶಾಲೆಯಲ್ಲಿ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ನಿಗದಿಪಡಿಸಿರುವ ನಿರ್ವಹಣಾ ವೆಚ್ಚಕ್ಕೆ ಸೀಮಿತಗೊಳಿಸಿ ಇಂತಹ ಪ್ರತಿಷ್ಠಿತ ವಸತಿ ಶಾಲೆಗಳಲ್ಲಿ ಪ್ರವೇಶಾವಕಾಶ ಕಲ್ಪಿಸಲು ಮತ್ತು ವಸತಿ ಸೌಲಭ್ಯ ಇಲ್ಲದಂತಹ ಪ್ರತಿಷ್ಠಿತ ಶಾಲೆಗಳಲ್ಲಿ ವಿದ್ಯಾರ್ಥಿಯ ಶಿಕ್ಷಣಕ್ಕೆ ಇರುವ ಕಡ್ಡಾಯ ಶುಲ್ಕವನ್ನು ಹಿಂದುಳಿದ ವರ್ಗಗಳ ಇಲಾಖೆಯಿಂದ ಪಾವತಿಸಲು ಮಂಜೂರಾತಿ ನೀಡಿದೆ.

ಷರತ್ತುಗಳು

1. ಅ) ಸಾಮಾನ್ಯ ಅರ್ಹತೆ

ವಿದ್ಯಾರ್ಥಿಯು ಪ್ರಸ್ತುತ ಜಾರಿಯಲ್ಲಿರುವ 30.3.2002 ರ ಆದೇಶದ ಹಿಂದುಳಿದ ವರ್ಗಗಳ ಪ್ರವರ್ಗ-1 ರಲ್ಲಿನ ಜಾತಿಗೆ ಸೇರಿದ್ದು, 1977 ರಲ್ಲಿ ಹಿಂದುಳಿದ ವರ್ಗಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸುವ ಪೂರ್ವದಲ್ಲಿ ಹೊರಡಿಸಲಾದ ರಾಜ್ಯಸರ್ಕಾರದ ದಿನಾಂಕ:01.02.1966 ರ ಆದೇಶದಲ್ಲಿ ಅಲೆಮಾರಿ /ಅರೆ ಅಲೆಮಾರಿ ಪಂಗಡದವರಾಗಿ ಗುರುತಿಸಲ್ಪಟ್ಟಿರಬೇಕು.

ಆ) ವಿದ್ಯಾರ್ಥಿಯು ತಂದೆ /ತಾಯಿ/ಪೋಷಕರು ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರಾಗಿರಬೇಕು ಕೂಲಿ ಕಾರ್ಮಿಕರ ಮಕ್ಕಳಿಗೆ ಆದ್ಯತೆ.

2. ಆದಾಯ ಮಿತಿ

ವಿದ್ಯಾರ್ಥಿಯ ತಂದೆ /ತಾಯಿ/ಪೋಷಕರ ವರಮಾನ ರೂ.1.00 ಲಕ್ಷಕ್ಕಿಂತ ಮೀರಿರಬಾರದು.

3. ವಿದ್ಯಾರ್ಹತೆ

ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು, ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಶೇ.60 ಅಂಕ ಪಡೆದಿರಬೇಕು.

4. ಅನುದಾನ ಪಾವತಿಸುವ ವಿಧಾನ

   1. ಪ್ರತಿಷ್ಠಿತ ಶಾಲೆಗಳಲ್ಲಿ ವಸತಿ, ಭೋಜನ ವೆಚ್ಚ ಶಾಲೆಯ ಕಡ್ಡಾಯ ಶುಲ್ಕ ಸಮವಸ್ತ್ರ ಪಠ್ಯ ಪುಸ್ತಕ, ಪ್ರವಾಸ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಇತರ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿದಂತೆ ಪಾವತಿಸುವುದು.

2. ವಸತಿ ರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ಭೋಜನ ಮತ್ತು ವಸತಿ ವೆಚ್ಚವನ್ನು ಶಾಲೆ ಪಾವತಿಸಬಾರದು. ಆದರೆ ಸಾರಿಗೆ ವೆಚ್ಚವನ್ನು ಭರಿಸುವುದು.
3. ಸ್ಥಳೀಯರಲ್ಲದ ವಿದ್ಯಾರ್ಥಿಗಳಿಗೆ ವಸತಿ ಮತ್ತು ಭೋಜನಾ ಸೌಕರ್ಯಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಡಳಿತಕ್ಕೊಳಪಡುವ ವಿದ್ಯಾರ್ಥಿನಿಲಯಗಳಲ್ಲಿ ಕಡ್ಡಾಯವಾಗಿ ಕಲ್ಪಿಸುವುದು.

ಸ್ಥಳೀಯರಲ್ಲದ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವ ಶಾಲೆ, ವಸತಿ ಶಾಲೆಯಾಗಿರದೇ ಇದ್ದ ಪಕ್ಷದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಡಳಿತಕ್ಕೊಳಪಡುವ ಯಾವುದೇ ಇಲಾಖೆಯ ವಿದ್ಯಾರ್ಥಿ ನಿಲಯದಲ್ಲಿ ಕಡ್ಡಾಯವಾಗಿ ಆದ್ಯತೆಯ ಮೇಲೆ ಕಡ್ಡಾಯವಾಗಿ ಪ್ರವೇಶ ಕಲ್ಪಿಸುವುದು

5. ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶಕ್ಕಾಗಿ ವಿದ್ಯಾರ್ಥಿಗಳ ಆಯ್ಕೆ ವಿಧಾನ

i. ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಡಿಡಿಪಿಐ ಮತ್ತು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಇವರುಗಳನ್ನೊಳಗೊಂಡ ಆಯ್ಕೆ ಸಮಿತಿಯು ಪ್ರತಿಷ್ಠಿತ ಶಾಲೆಯನ್ನು ಗುರುತಿಸಿ ವಿದ್ಯಾರ್ಥಿಗಳ ಆಯ್ಕೆಯನ್ನು ಮಾಡುವುದು.

ಜಿಲ್ಲಾ ಅಧಿಕಾರಿಗಳ ಸಮಿತಿಯ ಜೊತೆಗೆ (Simultaneously) ರಾಜ್ಯಮಟ್ಟದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕರು ಮತ್ತು ಸಮಾಜ ಕಲ್ಯಾಣ ಇಲಾಖಾ ಆಯುಕ್ತರುಗಳಗೊಂಡಂತೆ ಸಭೆ ನಡೆಸಿ ಪ್ರತಿಷ್ಠಿತ ಶಾಲೆಗಳ ಪಟ್ಟಿಯನ್ನು ರಚಿಸಲು ಅನುಕೂಲ ಮಾಡಿಕೊಡುವುದು.

ಯಾವ ಪ್ರತಿಷ್ಠಿತ ಶಾಲೆಗಳು ತಮ್ಮದೇ ಆದಾ ಕಾರ್ಯ ವಿಧಾನವನ್ನು ಅನುಸರಿಸಿ ಪ್ರವೇಶ ಪರೀಕ್ಷೆ ಮೂಲಕ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದೋ ಅಂತಹ ಶಾಲೆಗಳು ತಮ್ಮ ಹಂತದಲ್ಲಿಯೇ ಪ್ರತಿಭಾನ್ವಿತ ಅಲೆಮಾರಿ / ಅರೆ ಅಲೆಮಾರಿ ವರ್ಗದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು.

2007–08ನೇ ಸಾಲಿಗೆ ರಾಜ್ಯವಲಯ ಲೆಕ್ಕ ಶೀರ್ಷಿಕೆ 2225–03–800–0–12 ರಲ್ಲಿ ಅಲೆಮಾರಿ /ಅರೆ ಅಲೆಮಾರಿ ಜಂಗಡದವರ ಅಭಿವೃದ್ಧಿಗಾಗಿ ಒದಗಿಸಿರುವ ರೂ.400.00 ಲಕ್ಷಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳಿಗೆ ರೂ.100.00 ಲಕ್ಷಗಳನ್ನು ಹಂಚಿಕೆ ಮಾಡಿ. ಇದರಲ್ಲಿ ಪ್ರತಿಷ್ಠಿತ ಶಾಲೆಗಳಿಗೆ ಅಲೆಮಾರಿ ಮತ್ತು ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಸೌಲಭ್ಯ ಒದಗಿಸುವ ಈ ಯೋಜನೆಯ ಅನುಷ್ಠಾನಕ್ಕೆ ಪ್ರಾರಂಭಿಕವಾಗಿ ರೂ.15.00 ಲಕ್ಷಗಳನ್ನು ವಿನಿಯೋಗಿಸುವುದು. ಒಂದು ವೇಳೆ ಇದರಲ್ಲಿ ಪೂರ್ಣ ಹಣವು ಖರ್ಚಾಗದೇ ಇರುವ ಸಂದರ್ಭದಲ್ಲಿ ಉಳಿತಾಯವಾಗಬಹುದಾದ ಹಣವನ್ನು ಪ್ರಾರಂಭದಲ್ಲಿಯೇ ಅಂದಾಜು ಮಾಡಿ ಅದನ್ನು ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ಮಂಜೂರಾತಿ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ನಿರ್ದೇಶಕರು ತಮ್ಮ ಹಂತದಲ್ಲಿಯೇ ಮರು ಹಂಚಿಕೆ ಮಾಡಿಕೊಂಡು ವಿನಿಯೋಗಿಸಲು ನಿರ್ದೇಶಕರಿಗೆ ಅನುಮತಿ ನೀಡಿದೆ.

(ಎಂ.ಎಂ.ಬಾಟ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ